ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಸೋಮವಾರ, ೧೮, ಮೇ, ೨೦೨೬ (ವೈಶಾಖ, ೨೮, ಶಕವರ್ಷ, ೧೯೪೮)	ಸಂಚಿಕೆ ೯೩
Volume - 161	BENGALURU, MONDAY, 18, MAY, 2026 (VAISHAKHA , 28, SHAKAVARSHA, 1948)	Issue 93

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಕರ್ನಾಟಕ ಸರ್ಕಾರ

ಸಂಖ್ಯೆ. ಕಂಇ 93 ಎಕ್ಯೂಬಿ 2022

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16.05.2026

ಅಧಿಸೂಚನೆ

ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು-2 ಹೋಬಳಿ, ತ್ಯಾಮಗೊಂಡ್ಲು ಅಮಾನಿಕೆರೆ ಗ್ರಾಮದಲ್ಲಿನ ಸ.ನಂ.27/1 ಹಾಗೂ ಇತರೆಗಳಲ್ಲಿ ಒಟ್ಟು 03-02 ½ ಎಕರೆ-ಗುಂಟೆ ವಿಸ್ತೀರ್ಣ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013"ರ ಕಲಂ-25ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಪ್ರಕರಣದಲ್ಲಿ ಐತೀರ್ಪು ರಚಿಸಲು ದಿನಾಂಕ:01.05.2025 ರಿಂದ ದಿನಾಂಕ:31.06.2026 ರವರೆಗೆ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೇಮಲತ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-2)

PR-411

ಕಂದಾಯ ಸಚಿವಾಲಯ

ನಮೂನೆ–VII

[ಕರ್ನಾಟಕ ತಿದ್ದುಪಡಿ ನಿಯಮ–6]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ಕಲಂ 19(1) ರ ಮೇರೆಗೆ ಅಧಿಸೂಚನೆ

ಸಂಖ್ಯೆ : ಕಂ.ಇ.79 ಎಕ್ಯೂಟಿ 2025 **ದಿನಾಂಕ: 13.05.2026**

ಸಾರ್ವಜನಿಕ ಉದ್ದೇಶದ **ಮಾಗಡಿ ಮತ್ತು ಕುಣಿಗಲ್ ತಾಲ್ಲೂಕಿಗೆ ಕುಡಿಯುವ ನೀರು ಒದಗಿಸುವ ಉದ್ದೇಶಕ್ಕಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 70 ಕಿಮೀ. ನಿಂದ ಗುರುತ್ವಾಕರ್ಷಣೆ ಪೈಪ್ ಲೈನ್ ಅಳವಡಿಸುವ ಮುಖಾಂತರ ಶ್ರೀರಂಗ ಕೆರೆ ತುಂಬಿಸುವ ಯೋಜನೆಗೆ ಭೂಸ್ವಾಧೀನ ಪಡಿಸುವ ಉದ್ದೇಶಕ್ಕಾಗಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ದಂಡಿನಶಿವರ ಹೋಬಳಿಯ ಕುರುಬರಹಳ್ಳಿ** ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಭೂಸ್ವಾಧೀನತೆಯ ಅವಶ್ಯಕತೆ ಕಂಡುಬಂದಿರುವುದರಿಂದ ಹಾಗೂ ಈ ಯೋಜನೆಗೆ **"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013"** (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23.07.2019 ರಿಂದ ಜಾರಿಗೆ ಬಂದಿರುವ **"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019"** (2019ರ ಕರ್ನಾಟಕ ಅಧಿನಿಯಮ ಸಂಖ್ಯೆ 16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಕಂ.ಇ.36 ಭೂಸ್ವಾವಿ 2014, ದಿನಾಂಕ:22.04.2014ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದೆ. 2013ರ ಮೂಲ ಕಾಯ್ದೆಯ ಕಲಂ–11(1) ರಡಿ ತುಮಕೂರು ಜಿಲ್ಲಾಧಿಕಾರಿಗಳ ಅಧಿಸೂಚನೆ ಕ್ರಮಾಂಕ: TMKDC/LND2/LAQN/221/2025-LAND-TUMKUR DC ಇ-727217 **ದಿನಾಂಕ:29.06.2025** ರಲ್ಲಿ ಕಲಂ11(1)ರ ಅಧಿಸೂಚನೆ ಅನುಮೋದಿಸಿದ್ದು. ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ:19.07.2025** ರಂದು ಅಧಿಸೂಚನೆ ಪ್ರಕಟಿಸಿದಂತೆ ಕಲಂ–15(1) ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ/ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಆಲಿಸಿದ ನಂತರ ಹಾಗೂ ಸೂಕ್ತ ವಿಚಾರಣೆಯನ್ನು ನಡೆಸಿದ ನಂತರ ವಿಚಾರಣಾ ವರದಿಯನ್ನು ಸರ್ಕಾರದ ಪತ್ರ ಸಂಖ್ಯೆ: **ಕಂ.ಇ.79 ಎಕ್ಯೂಟಿ 2025,** ದಿನಾಂಕ:**15.11.2025ರ**ಲ್ಲಿ ಒಪ್ಪಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ದೇಶನ ನೀಡಲಾಗಿದೆ.

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013"ರ ಕಲಂ–19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆಯೆಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿರುವ ಉದ್ದೇಶಕ್ಕೆ ಜಮೀನುಗಳು ಅಗತ್ಯವಾಗಿದೆಯೆಂದು ಸದರಿ ಅಧಿನಿಯಮ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣದ (ಜಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾವಲಯ, ತುಮಕೂರು ಇವರನ್ನು ಸದರಿ ಜಮೀನುಗಳ ಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: **ಕಂ.ಇ.19 ಎಕ್ಯೂಟಿ 2025ರಂತೆ** ದಿನಾಂಕ:**23.05.2025**ರನ್ವಯ ಸದರಿ ಯೋಜನೆಗೆ 2013ರ ಮೂಲ ಕಾಯ್ದೆಯ ಅನುಸೂಚಿ II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ 2013ರ ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಅವಕಾಶಗಳ ಬದಲಾಗಿ ನೀಡಲಾಗುವ ಒಂದು ಇಡಿಗಂಟು ಮೊತ್ತವನ್ನು **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು–2020ರ** ನಿಯಮ 29(ಎ)(4)ರಂತೆ ನಿಗಧಿಪಡಿಸಲು ತೀರ್ಮಾನಿಸಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಅಧಿನಿಯಮದ ಕಲಂ–21(1)ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆಯ ನೋಟೀಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ವಿವರಗಳನ್ನು ಸೂಚಿಸುವ ಒಂದು ನಕ್ಷೆಯನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಹಾಗೂ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಅವಗಾಹನೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾ ವಲಯ, ತುಮಕೂರು ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ತುಮಕೂರು **ತಾಲ್ಲೂಕು : ತುರುವೇಕೆರೆ** **ಹೋಬಳಿ : ದಂಡಿನಶಿವರ** **ಗ್ರಾಮ : ಕುರುಬರಹಳ್ಳಿ**

ಕ್ರ ಸಂ.	ಖಾತೆದಾರರ ಹೆಸರು (ಜೆ.ಎಂ.ಸಿ ಯನ್ವಯ)		ಸರ್ವೆ ನಂಬರ್	ಹಿಸ್ಸಾ ನಂಬರ್	ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ (ಕಲಂ–11(1) ರನ್ವಯ)			ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ			ಚೆಕ್ಕಬಂದಿ/ಸರಹದ್ದು				ಮರ/ಮಾಲ್ಕಿಗಳ ವಿವರ				ಷರಾ
	ಭೂಮಾಲೀಕರ/ ಹಿಡುವಳಿದಾರರ ಹೆಸರು	ಅನುಭವ ದಾರರ ಹೆಸರು			ಕೃಷಿ/ ಕೃಷಿಯೇತರ	ಖರಾಬು	ತರಹೆ	ಕೃಷಿ/ ಕೃಷಿಯೇತರ	ಖರಾಬು	ತರಹೆ	ಉ	ಪೂ	ದ	ಪ	ಮರಗಳ ವಿಧ	ಮರಗಳ ಸಂಖ್ಯೆ	ಮಾಲ್ಕಿ/ ಕಟ್ಟಡಗಳ ವಿವರ	ಮಾಲ್ಕಿ / ಕಟ್ಟಡಗಳ ಸಂಖ್ಯೆ / ವಿಸ್ತೀರ್ಣ	
1	2	3	4	5	6	7	8	9	10	11	12	13	14	15	16	17	18	19	20
1	ಸುಶೀಲಮ್ಮ ಕೋಂ ಲೇ.ಬಸವರಾಜು	ಸುಶೀಲಮ್ಮ ಕೋಂ ಲೇ.ಬಸವರಾಜು	168	1	0–06	–	ತರಿ	0–05 1/4	–	ತರಿ	ಸ.ನಂ 94	ಉಳಿಕೆ	ಸ.ನಂ 169/2	ಉಳಿಕೆ	ತೆಂಗು ಅಡಿಕೆ ಹಲಸು	15 50 01	–	–	–

2	ಮಹದೇವಯ್ಯ ಬಿನ್ ಶಿವಣ್ಣ	ಮಹದೇವಯ್ಯ ಬಿನ್ ಶಿವಣ್ಣ	169	1	0–04	–	ಖುಷ್ಕಿ	0–03 1/2	–	ಖುಷ್ಕಿ	ಸ.ನಂ 169/2	ಉಳಿಕೆ	ಸ.ನಂ 170/1 , ಸ.ನಂ 170/7 , ಸ.ನಂ 170/8	ಉಳಿಕೆ	ತೆಂಗು ಅಡಿಕೆ	14 50	–	–	–
3	ನಂಜುಂಡಪ್ಪ ಬಿನ್ ಬಸಪ್ಪ	ನಂಜುಂಡಪ್ಪ ಬಿನ್ ಬಸಪ್ಪ	169	2	0–03 1/2	–	ಖುಷ್ಕಿ	0–03	–	ಖುಷ್ಕಿ	168/1	ಉಳಿಕೆ	ಸ.ನಂ 169/1	ಉಳಿಕೆ	ತೆಂಗು ಅಡಿಕೆ	20 25	ಸಣ್ಣ ಶೇಡ್	01	
4	ಶಿವರುದ್ರಸ್ವಾಮಿ ಕೆ.ಯು. ಬಿನ್ ಕೆ.ವಿ.ಉಮಾಕಾಂತಂಯ್ಯ	ಶಿವರುದ್ರಸ್ವಾಮಿ ಕೆ.ಯು. ಬಿನ್ ಕೆ.ವಿ.ಉಮಾಕಾಂತಯ್ಯ	170	8	0–02 1/2	–	ಖುಷ್ಕಿ	0–01 1/4	0–00 1/4	ಖುಷ್ಕಿ	ಉಳಿಕೆ	ಸ.ನಂ 170/2	ಉಳಿಕೆ	ಉಳಿಕೆ	ತೆಂಗು ಅಡಿಕೆ	09 20	–	–	–
5	ಶ್ರೀಮತಿ.ಸಿದ್ದಗಂಗಾ ಕೆ.ಕೆ. ಕೋಂ ನವೀನ್ ಕುಮಾರ್ ಆರ್.	ಶ್ರೀಮತಿ.ಸಿದ್ದಗಂಗಾ ಕೆ.ಕೆ. ಕೋಂ ನವೀನ್ ಕುಮಾರ್ ಆರ್.	170	2	0–03	–	ಖುಷ್ಕಿ	0–02 1/2	–	ಖುಷ್ಕಿ	ಉಳಿಕೆ	ಉಳಿಕೆ	ಸ.ನಂ 170/5	ನಾಲೆ	ತೆಂಗು	10	–	–	–
6	ಮಹದೇವಯ್ಯ ಬಿನ್ ಸುಗ್ಗೀರಯ್ಯ	ಮಹದೇವಯ್ಯ ಬಿನ್ ಸುಗ್ಗೀರಯ್ಯ	170	3	0–00 3/4	–	ತರಿ	0–02 3/4	–	ತರಿ	ಉಳಿಕೆ ಸ.ನಂ 170/4	ಸ.ನಂ 170/4	ಉಳಿಕೆ ಸ.ನಂ 171	ಸ.ನಂ 170/4	ಪಾಪ್ಪಾಯ ಅಡಿಕೆ ಸಸಿ	60 60	–	–	170/3ರಲ್ಲಿ 170/3, 170/4 ಎಂದು ದುರಸ್ತಾಗಿದ್ದು ಪಹಣಿ ಇಂಡಿಕರಣವಾಗಿರುವುದಿಲ್ಲ
7	ಮಹಾಲಕ್ಷ್ಮಮ್ಮ ಕೋಂ ಲೇ.ಕೃಷ್ಣಪ್ಪ	ಮಹಾಲಕ್ಷ್ಮಮ್ಮ ಕೋಂ ಲೇ.ಕೃಷ್ಣಪ್ಪ	171	*	0–03 1/4	–	ಖುಷ್ಕಿ	0–02 1/2	–	ಖುಷ್ಕಿ	ಸ.ನಂ 170/3	ಉಳಿಕೆ	ಸ.ನಂ 172/1	ಉಳಿಕೆ	ತೆಂಗು ಅಡಿಕೆ	10 00	–	–	

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

8	ರಾಜಮ್ಮ ಕೋಂ ಲೇ.ಶ್ರೀನಿವಾಸ ಕೆ.ಎನ್.	ರಾಜಮ್ಮ ಕೋಂ ಲೇ.ಶ್ರೀನಿವಾಸ ಕೆ.ಎನ್.	172	1	0–03	–	ಖುಷ್ಕಿ	0–02 1/4	–	ಖುಷ್ಕಿ	ಸ.ನಂ 171	ಉಳಿಕೆ	ಸ.ನಂ 172/2	ಉಳಿಕೆ	ತೆಂಗು	15	–	–	
9	ಕೃಷ್ಣಯ್ಯ ಬಿನ್ ಚಿಕ್ಕಣ್ಣ ಗವಿಯಮ್ಮ ಕೋಂ ವೈಕುಂಠಯ್ಯ	ಕೃಷ್ಣಯ್ಯ ಬಿನ್ ಚಿಕ್ಕಣ್ಣ ಗವಿಯಮ್ಮ ಕೋಂ ವೈಕುಂಠಯ್ಯ	172	2	0–01	–	ಖುಷ್ಕಿ	0–00 3/4	–	ಖುಷ್ಕಿ	ಸ.ನಂ 172/1	ರಾಂಪುರ ಗಡಿ	ಉಳಿಕೆ	ಉಳಿಕೆ	ತೆಂಗು ಅಡಿಕೆ	08 30	–	–	
							ಖುಷ್ಕಿ ತರಿ ಖರಾಬು ಒಟ್ಟು	**0–15 3/4 0–08 0–00 1/4 0–24**											

ಘೋಷ್ವಾರೆ

ಗ್ರಾಮ	ಖುಷ್ಕಿ ಎ–ಗು	ತರಿ ಎ–ಗು	ಬಾಗಾಯ್ತು ಎ–ಗು	ಖರಾಬು ಎ–ಗು	ಒಟ್ಟು ಎ–ಗು
ಕುರುಬರಹಳ್ಳಿ	0–15 3/4	0–08	–	0–00 1/4	0–24

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೇಮಲತ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-2)

PR-412

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH